# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು–560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 22.02.2011**

## ***ರಸ್ತೆ ನಾಮಕರಣ : ಸಾರ್ವಜನಿಕ ಆಕ್ಷೇಪಣೆಗೆ ಆಹ್ವಾನ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬಸವನಗುಡಿ ಕ್ಷೇತ್ರದ ಮಾಜಿ ಶಾಸಕರು, ರಾಜ್ಯದ ಮಾಜಿ ಸಚಿವರು ಹಾಗೂ ಹೆಸರಾಂತ ನೀರಾವರಿ ತಜ್ಞರಾದ ***"ದಿ. ಶ್ರೀ ಹೆಚ್.ಎನ್. ನಂಜೇಗೌಡ ರಸ್ತೆ"*** ಎಂದು ನಾಮಕರಣ ಮಾಡಲು ದಿನಾಂಕ: 13.01.2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಆದುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಆಕ್ಷೇಪಣೆಗಳಿದ್ದಲ್ಲಿ ಈ ಪತ್ರಿಕಾ ಪ್ರಕಟಣೆ ಹೊರಡಿಸಲಾದ ದಿನಾಂಕದಿಂದ 30 ದಿನದೊಳಗೆ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು–02, ಇವರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ತಿಳಿಸಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 22.02.2011**

ನಿನ್ನೆ ರಾತ್ರಿ ನಗರದಲ್ಲಿ ಸತತವಾಗಿ 3 ಗಂಟೆ ಕಾಲ ಮಳೆಯಾದ ಹಿನ್ನೆಲೆಯಲ್ಲಿ ಮಳೆ ನೀರಿನಿಂದ ತೊಂದರೆ ಉಂಟಾಗಬಹುದಾದ ತಗ್ಗು ಪ್ರದೇಶಗಳಾದ ಈಜೀಪುರ, ನ್ಯಾಷನಲ್ ಗೇಮ್ಸ್ ವಿಲೇಜ್, ಕೋರಮಂಗಲದ ಕೆಲವು ತಗ್ಗು ಪ್ರದೇಶಗಳಲ್ಲಿ ಪಾಲಿಕೆ ಆಯುಕ್ತರು ಇಂದು ಬೆಳಿಗ್ಗೆ ತಪಾಸಣೆ ಕೈಗೊಂಡು ಮುಂಬರುವ ಮಳೆಗಾಲದಲ್ಲಿ ಈ ಪ್ರದೇಶದಲ್ಲಿ ಯಾವುದೇ ರೀತಿಯ ತೊಂದರೆಯಾಗದಂತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

- ಕೋರಮಂಗಲ ನ್ಯಾಷನಲ್ ಗೇಮ್ಸ್ ವಿಲೇಜ್ ಪಕ್ಕದಲ್ಲಿ ಹರಿಯುವ ಮಳೆ ನೀರಿನ ದೊಡ್ಡ ಮೋರಿಗೆ ಅಡ್ಡಲಾಗಿ ನಿರ್ಮಿಸಿದ ಬಹಳ ಹಳೆಯ ಸೇತುವೆ ಬಾಗಿಲುಗಳು ಕಿರಿದಾಗಿದ್ದರಿಂದ ಮಳೆಗಾಲದಲ್ಲಿ ತ್ಯಾಜ್ಯಗಳಿಂದ ತುಂಬಿ ಹಿಂಭಾಗದಲ್ಲಿರುವ ಪ್ರದೇಶದಲ್ಲಿ ಪ್ರವಾಹ ಉಂಟಾಗುವುದನ್ನು ತಡೆಗಟ್ಟುವ ಸಲುವಾಗಿ ಸೇತುವೆಯನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಅನೇಕ ವರ್ಷಗಳಿಂದ ಮನವಿ ಮಾಡಿರುವ ಹಿನ್ನೆಲೆಯಲ್ಲಿ ಆಯುಕ್ತರು ಸ್ಥಳ ಪರಿಶೀಲನೆ ಮಾಡಿ, ನಾಳೆಯಿಂದಲೇ ಸೇತುವೆ ತೆರವುಗೊಳಿಸುವ ಕಾರ್ಯ ಪ್ರಾರಂಭಿಸಲು ಸೂಚಿಸಿದರು. ಇದರಿಂದ ಈಜೀಪುರ, ನ್ಯಾಷನಲ್ ಗೇಮ್ಸ್ ವಿಲೇಜ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಗುವ ತೊಂದರೆ ತಪ್ಪಿಸಲು ಕೂಡಲೇ ಕಾರ್ಯಾರಂಭ ಮಾಡಲು ಮುಖ್ಯ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರಿಗೆ ಸೂಚಿಸಿದರು.
- ಕೋರಮಂಗಲ, ಈಜೀಪುರ, ಜಕ್ಕಸಂದ್ರ, ಬಿ.ಟಿ.ಎಂ. ಬಡಾವಣೆಗಳಲ್ಲಿ ಕೆಲವು ಹಲವಾರು ರಸ್ತೆಗಳಲ್ಲಿ ತಿರುಗಾಡಿ ಪರಿಶೀಲನೆ ನಡೆಸಿದರು. ಈ ಸಮಯದಲ್ಲಿ ರಸ್ತೆ ಬದಿ ಮೋರಿಗಳು ಕಸ / ಮಣ್ಣಿನಿಂದ ತುಂಬಿ ನೀರು ಸರಾಗವಾಗಿ ಹರಿದು ಹೋಗದೇ ರಸ್ತೆಯಲ್ಲಿ ನೀರು ನಿಂತಿರುವುದನ್ನು ಗಮನಿಸಿದರು. ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಿ, ರಸ್ತೆ ಬದಿ ಮೋರಿಗಳಿಗೆ ನೀರು ಹರಿದು ಹೋಗುವಂತೆ ಬಿಟ್ಟಿರುವ ಜಾಗದಲ್ಲಿ ಆಗಿಂದ್ದಾಗೆ ಸ್ವಚ್ಛಗೊಳಿಸಿ, ರಸ್ತೆ ಮೇಲೆ ಎಲ್ಲೂ ನೀರು ನಿಲ್ಲದಂತೆ ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿದು ಹೋಗುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.
- ಕೋರಮಂಗಲದ 17ನೇ ಇ ಮೈನ್ ಮತ್ತು 17ನೇ ಬಿ ಮೈನ್ ಮಧ್ಯದಲ್ಲಿರುವ ಪಾಲಿಕೆಯ ಉದ್ಯಾನವನವನ್ನು CART MAN ಸಂಸ್ಥೆಯವರು ನಿರ್ವಹಿಸುತ್ತಿದ್ದು, ಈ ಉದ್ಯಾನವನದಲ್ಲಿ ಮೂಲಭೂತ ಸೌಕರ್ಯಗಳ ಅವಶ್ಯಕತೆ ಇರುವುದನ್ನು ಗಮನಿಸಿದ ಆಯುಕ್ತರು ಸ್ಥಳದಲ್ಲೇ ಉದ್ಯಾನವನದ ಸುತ್ತಲು ಪಾಥ್‌ವೇ, ಮಳೆ ನೀರಿನ ಸಂಗ್ರಹಣೆ, ಆಟದ ಉಪಕರಣಗಳು, ಕೊಳ ನಿರ್ಮಿಸಲು ಅಂದಾಜು ವೆಚ್ಚ ರೂ.25.00 ಲಕ್ಷಗಳಿಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸ್ಥಳದಲ್ಲೇ ಅನುಮೋದನೆ ನೀಡಿದರು.
- ಕೋರಮಂಗಲದಲ್ಲಿರುವ ಲೋಕೋಪಯೋಗಿ ಇಲಾಖೆಯ ಮತ್ತು ರಕ್ಷಣಾ ಇಲಾಖೆಯ ಕಟ್ಟಡಗಳಿದ್ದು, ಲೋಕೋಪಯೋಗಿ ಇಲಾಖೆಯ ಕಟ್ಟಡಗಳಿಂದ ರೂ.3.00 ಕೋಟಿ ರೂ.ಗಳ ಆಸ್ತಿ ತೆರಿಗೆ ಮತ್ತು ರಕ್ಷಣಾ ಇಲಾಖೆಯ ಕಟ್ಟಡಗಳಿಂದ ರೂ.50.00 ಲಕ್ಷ ರೂ.ಗಳ ಆಸ್ತಿ ತೆರಿಗೆ ಪಾವತಿಯಾಗಬೇಕಾಗಿದ್ದು, ಇಲಾಖೆಯವರು ಸದರಿ ಕಟ್ಟಡಗಳ ಆಸ್ತಿ ತೆರಿಗೆ ಪಾವತಿ ಮಾಡದೇ ಇದ್ದುದರಿಂದ ಆಯುಕ್ತರು ಸ್ಥಳ ಪರಿಶೀಲಿಸಿ, ಸಹ ಕಂದಾಯ ಅಧಿಕಾರಿ (ಕೋರಮಂಗಲ) ರವರಿಗೆ ಸೂಚನೆ ನೀಡಿ, ಸಂಬಂಧಪಟ್ಟ ಇಲಾಖೆಗೆ ನೋಟೀಸ್ ಜಾರಿ ಮಾಡಿ, 15 ದಿನಗಳೊಳಗಾಗಿ ಆಸ್ತಿ ತೆರಿಗೆ ಪಾವತಿ ಮಾಡುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

ತಪಾಸಣೆ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಶ್ರೀಮತಿ ಬಿ.ಎನ್. ಕೋಕಿಲ ರಾಧಾಕೃಷ್ಣ, ಶ್ರೀಮತಿ ಸರಸ್ವತಮ್ಮ, ಶ್ರೀ ಜಿ.ಎನ್.ಆರ್. ಬಾಬು, ಶ್ರೀಮತಿ ಟಿ.ಎಂ. ಸರೋಜಾ, ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**